ದಿನಾಂಕಃ 21-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ-</u> 3 ಮತ್ತು 4 ನೇ ಪ್ರತಿವಾದಿ ಪರ ಶ್ರೀ ಆರ್ ಎಂ ಹೆಚ್ ವಕೀಲರಿಂದ

ನಿಪಿ 1 ನ್ನು ನಾನು ನಮ್ಮ ಕಚೇರಿಯಲ್ಲಿ ಬರೆದಿದ್ದೇನೆ. ನಿಪಿ 1 ನ್ನು ಬೆರಳಚ್ಚು ಮಾಡಿಸಿದ್ದೆನೆ. ನಮ್ಮ ಕಚೇರಿಯ ಗಣಕಯಂತ್ರದಲ್ಲಿ ನಿಪಿ 1 ನ್ನು ಬೆರಳಚ್ಚು ಮಾಡಲಾಗಿದೆ. ನಿಪಿ 1 ನ್ನು ನನ್ನ ಮಗ ಮಧ್ವಾಚಾರ್ಯ ಬೆರಳಚ್ಚು ಮಾಡಿದ್ದಾರೆ. ದಸ್ತಾವೇಜು ಬರೆಯಲು ನನ್ನ ಮಗನ ಹತ್ತಿರ ಲೈಸನ್ಸ ಇದೆ. ನನ್ನ ಮಗ ನಿಪಿ 1 ಕ್ಕೆ ಸಹಿ ಮಾಡಿಲ್ಲ. ನಿಪಿ 1 ತಯಾರಿಸಲು ನನ್ನ ಮಗನಿಗೆ ನಾನು ಮಾಹಿತಿ ಕೊಟ್ಟಿದ್ದೆ. ಪ್ರತಿವಾದಿಯರು ಕೊಟ್ಟಂತಹ ಮಾಹಿತಿಯನ್ನು ನಾನು ಬರೆದುಕೊಂಡು ನನ್ನ ಮಗನಿಗೆ ಆ ಮಾಹಿತಿ ಕೊಟ್ಟಿದ್ದೆ.

ನಿಪಿ 1 ಸಂಜೆ 4 ಗಂಟೆಗೆ ತಯಾರಿಸಿದ್ದೆವು. ನಿಪಿ 1 ತಯಾರಿಸುವಾಗ 9 ಜನರು ನನ್ನ ಕಚೇರಿಗೆ ಬಂದಿದ್ದರು. ಸದರಿ 9 ಜನರು ನಿಪಿ 1 ತಯಾರಿಸುವಾಗ ಸಂಜೆ 4 ಗಂಟೆಗೆ ಮಾತ್ರ ಬಂದಿದ್ದರು ಎಂದರೆ ಸರಿ. ಸದರಿ 9 ಜನರು ದಾವಾ ಆಸ್ತಿಯ ಉತಾರ ತಂದಿದ್ದರು. ಮತ್ತೇ ಏನೂ ತಂದಿರಲಿಲ್ಲ. ಸಾಮಾನ್ಯವಾಗಿ ಆಸ್ತಿಯ ಉತಾರ ನೋಡಿ ಪತ್ರ ಬರೆಸಲು ಯಾರ್ಯಾರು ಬರಬೇಕು ಹಾಗೂ ಎಷ್ಟು ರೂಪಾಯಿಯ ಛಾಪಾಕಾಗದ ತರಬೇಕು ಎಂದು ನಾನು ತಿಳಿಸುತ್ತೇನೆ ಎಂದರೆ ಸರಿ. ನಾನು ಮೇಲೆ ಹೇಳಿದ 9 ಜನರು ಕರಾರುಪತ್ರ ಬರೆಯುವ ಮುಂಚೆ ನನ್ನನ್ನು ಭೇಟಿಯಾಗಿರಲಿಲ್ಲ

ಸಾಮಾನ್ಯವಾಗಿ ಖರೀದಿ ಪತ್ರ ಕ್ಕೆ ಪ್ರತಿ ಪುಟಕ್ಕೆ ಸಹಿ ಪಡೆಯುತ್ತೇವೆ ಎಂದರೆ ಸರಿ. ಅದೇ ಪ್ರಕಾರ ಖರೀದಿ ಸಂಚಕಾರ ಪತ್ರಕ್ಕೂ ಸಹ ಪ್ರತಿ ಪುಟಕ್ಕೆ ಸಹಿ ಪಡೆಯುತ್ತೇವೆ ಎಂದರೆ ಸರಿ . 1 ನೇ ಪ್ರತಿವಾದಿ ತಾನೇ ಸ್ವತಃ ಕರಾರುಪತ್ರ ಬರೆಯಲು ಛಾಪಾಕಾಗದ

ತಂದಿದ್ದರು. ಆತ ಅದೇ ದಿನ ಛಾಪಾಕಾಗದ ತಂದಿದ್ದರು. ನಿಪಿ 1 ರ 1 ರಿಂದ 3 ನೇ ಪುಟದಲ್ಲಿ ಸಹಿಗಳು ಇಲ್ಲ ಎಂದರೆ ಸಾಕ್ಷಿಯು ಸಹಿ ಪಡೆಯುವುದನ್ನು ಮರೆತಿದಿದ್ದೆನೆ ಎಂದು ನುಡಿದಿದ್ದಾರೆ. ನಿಪಿ 1 ನ್ನು ನಾನು ಮತ್ತು ವಾದಿ ಕೂಡಿ ಸೃಷ್ಟಿ ಮಾಡಿದ್ದು ಈಗ 1 ರಿಂದ 3 ನೇ ಪುಟದಲ್ಲಿ ಸಹಿ ಪಡೆಯುವುದು ಮರೆತಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ನಾನು ನಿಪಿ 1 ತಯಾರಿಸಿ ಓದಿ ಹೇಳಿದ ನಂತರ ವಾದಿ ಪ್ರತಿವಾದಿಯರಿಗೆ ಕರಾರುಪತ್ರದಂತೆ ಹಣ ಕೊಟ್ಟಿದ್ದಾರೆ ಕರಾರುಪತ್ರ ಬರೆಸುವಾಗ ವಾದಿ ಪ್ರತಿವಾದಿಯರಿಗೆ ಕೊಡಬೇಕಾದ ಹಣ ತಂದಿದ್ದರು. ವಾದಿ ರೂ. 1,000/- ಹಾಗೂ ರೂ. 500/- ರ ಮುಖಬೆಲೆಯ ನೋಟುಗಳನ್ನು ತಂದಿದ್ದು ಅದನ್ನು ಪ್ರತಿವಾದಿ 1 ಮತ್ತು 2 ರವರು ಎಣಿಸಿ ತೆಗೆದುಕೊಂಡರು. ನಿಪಿ 1 ರ ವಿಷಯಗಳನ್ನು ನಾನು ಅಲ್ಲಿ ಇದ್ದಂತಹ 9 ಜನರಿಗೆ ಓದಿ ಹೇಳಿರುತ್ತೇನೆ. 9 ಜನರ ಪೈಕಿ ಇಬ್ಬರು ಹೆಣ್ಣುಮಕ್ಕಳು ಬಂದಿದ್ದರು. ಸಾಕ್ಷಿಯು ಆನಂತರ 9 ಜನರ ಪೈಕಿ ಮೂರು ಜನ ಹೆಣ್ಣುಮಕ್ಕಳು ಇದ್ದರು ಎಂದು ನುಡಿದಿದ್ದಾರೆ. ಸದರಿ ಮೂರು ಜನ ಹೆಣ್ಣು ಮಕ್ಕಳ ಹೆಸರು ಅಕ್ಕಮಹಾದೇವಿ, ಸಾವಣ್ಣೆವ್ವ ಹಾಗೂ ಸಾಕ್ಷಿದಾರಳಾದ ಮಂಜುಳಾ. ಸದರಿ ಮೂರು ಜನರ ಸಹಿಗಳನ್ನು ನಿಪಿ 1 ಕ್ಕೆ ಪಡೆದಿದ್ದೆನೆ. ಆ ಮೂರು ಜನರ ಪೈಕಿ ಒಬ್ಬರು ಹೆಬ್ಬೆಟ್ಟಿನ ಗುರುತು ಹಾಕಿದ್ದಾರೆ.

ಆ ದಿನ 3 ನೇ ಪ್ರತಿವಾದಿ ಬರದಿದ್ದರೂ ಸಹ ನಾನು ವಾದಿ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಆ ದಿನ ನಾನು ಸ್ವತಃ ಯಾವುದೇ ಕರಾರುಪತ್ರ ತಯಾರಿಸಿಲ್ಲ ಎಂದರೆ ಸರಿಯಲ್ಲ . ನಿಪಿ 1 ರಲ್ಲಿ ಹೆಬ್ಬೆಟ್ಟಿನ ಗುರುತನ್ನು ನಾನೇ ಸೃಷ್ಟಿ ಮಾಡಿ ಅದು ಸಾವಣ್ಣೆವ್ವನ ಹೆಬ್ಬೆಟ್ಟಿನ ಗುರುತು ಎಂದು ಸುಳ್ಳು

ಬರೆದಿದ್ದೆನೆ ಎಂದರೆ ಸರಿಯಲ್ಲ. ನಿಪಿ 1 ಕ್ಕೆ ನನ್ನ ಮಗನ ಸಹಿ ಪಡೆಯಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ನನಗೆ ಸುಮಾರು ವರ್ಷದಿಂದ ವಾದಿಯ ಪರಿಚಯ ಇದೆ ಎಂದರೆ ಸರಿಯಲ್ಲ. ಪತ್ರ ಬರೆದ ಬಗ್ಗೆ ನಾನು ರಜಿಸ್ಟರನಲ್ಲಿ ಬರೆಯುತ್ತೇನೆ ಆದರೆ ಖರೀದಿ ಪತ್ರದ ಬಗ್ಗೆ ಮಾತ್ರ ಬರೆಯುತ್ತೇನೆ. ಖರೀದಿ ಪತ್ರ ನೊಂದ್ ಆಗುತ್ತವೆ, ಆದರೆ ಕರಾರುಪತ್ರ ನೊಂದ್ ಆಗದಿರುವ ಕಾರಣ ಆ ದಾಖಲೆಗಳ ಬಗ್ಗೆ ರಜಿಸ್ಟರನಲ್ಲಿ ಬರೆಯಬೇಕಾಗುತ್ತದೆ ಎಂದರೆ ಸರಿ. 2014 ನೇ ಸಾಲಿನ ದಸ್ತಾವೇಜು ಬರೆದ ರಜಿಸ್ಟರ ನನ್ನ ಕಚೇರಿಯಲ್ಲಿ ಇತ್ತು, ಆದರೆ ಮಳೆ ಬಂದು ಅದು ಹಾಳಾಗಿದೆ. ದಸ್ತಾವೇಜು ಹಾಗೂ ರಜಿಸ್ಟರುಗಳು ಹಾಳಾದ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿಲ್ಲ. 2014 ರಲ್ಲಿ ನಾನು ನಿಪಿ 1 ಬರೆದಿಲ್ಲ ಹಾಗೂ 4 ನೇ ಪ್ರತಿವಾದಿ ನನ್ನ ಕಚೇರಿಗೆ ಬಂದು ರಜಿಸ್ಟರಗೆ ಸಹಿ ಮಾಡದಿರುವ ಕಾರಣ ಈಗ ನಾನು ಮಳೆ ಬಂದು ರಜಿಸ್ಟರ ಹಾಳಾಗಿದೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ನಿಪಿ 1 ರ ಮೇಲೆ ರಜಿಸ್ಟರ ಸಂಖ್ಯೆ ಬರೆದಿಲ್ಲ. ನಾನು ನಿಪಿ 1 ಕರಾರುಪತ್ರ ಬರೆಯದಿದ್ದರೂ ಸಹ ವಾದಿಯೊಂದಿಗೆ ಕೂಡಿಕೊಂಡು ಕರಾರುಪತ್ರ ಬರೆದಿದ್ದೆನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ- 1 ನೇ ಪ್ರತಿವಾದಿ ಪರ ಶ್ರೀ ಪಿ ಆರ್ ಎಂ ವಕೀಲರಿಂದ

ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಳ್ಳಲು ನಿವೇದಿಸಿರುತ್ತಾರೆ.
(ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.

ಅಸಲು ದಾವಾ  ನಂ. 165/2017
ಪಿ ಡಬ್ಲು 2